# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ.8861/2015

| | |
|---|---|
| ಸಾಕ್ಷಿದಾರರ ಹೆಸರು : | ಸಾಧಿಕ್ ಪಾಷಾ |
| ತಂದೆಯ ಹೆಸರು : | ಸಯ್ಯದ್ ಬಷೀರ್ |
| ವಯಸ್ಸು : | 45 ವರ್ಷ |
| ಉದ್ಯೋಗ : | ಪೊಲೀಸ್ ಇನ್ಸಪೆಕ್ಟರ್ ದೊಡ್ಡಬಳ್ಳಾಪುರ ಗ್ರಾಮಾಂತರ ಪಿ.ಎಸ್. |
| ವಾಸ : | ದೊಡ್ಡಬಳ್ಳಾಪುರ. |

**ದಿನಾಂಕ 12/02/2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ ರವರಿಂದಃ**

1. ನಾನು ಜೂನ್-2014 ರಿಂದ ಜುಲೈ-2016 ರವರೆಗೆ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಪಿ.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 05/07/2014 ರಂದು ಚಾಸಾ-9 ರವರಿಂದ ಕಡತವನ್ನು ಮುಂದಿನ ತನಿಖೆಗೆ ಪಡೆದುಕೊಂಡಿರುತ್ತೇನೆ.

2. ದಿನಾಂಕ 06/07/2014 ರಂದು ಚಾಸಾ-1 ರವರ ಮರುಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ದಿನಾಂಕ 17/07/2014 ರಂದು ಚಾಸಾ-3 ರಿಂದ 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-1 ರವರು ಹಾಜರು ಪಡಿಸಿದ ಲಗ್ನ ಪತ್ರಿಕೆ ಹಾಗೂ ಮದುವೆಯ ಫೋಟೋಗಳನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ನಂತರ ಚಾಸಾ-1 ರವರು ಹಾಜರು ಪಡಿಸಿದ ಮದುವೆ ಸಂದರ್ಭದಲ್ಲಿ ವರದಕ್ಷಿಣೆ ನೀಡಿದ ಒಡವೆಗಳಿಗೆ ಸಂಬಂಧಿಸಿದ ಬಿಲ್ ಗಳು, ಮದುವೆ ಛತ್ರದ ಬಿಲ್, ಊಟದ ಖರ್ಚಿನ ಬಿಲ್ ಗಳು, ವರದಕ್ಷಿಣೆಗೆ ಕೊಟ್ಟ ಸಾಮಾನುಗಳ ಬಿಲ್ ಗಳ ಜರಾಕ್ಸ ಪ್ರತಿಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸ್ಪಂದನಾ

ವನಿತಾ ಸಹಾಯ ವಾಣಿಯಲ್ಲಿ ರಾಜಿ ಸಂದಾನ ಆದ ಬಗ್ಗೆ ದೃಢೀಕೃತ ದಾಖಲೆಗಳನ್ನು ಸ್ಪಂದನಾ ವನಿತಾ ಸಹಾಯ ವಾಣಿಯವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

3. ದಿನಾಂಕ 13/07/2014 ರಂದು ಆರೋಪಿತರು ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು, ಅವರ ಸ್ವ-ಇಚ್ಛಾ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ತನಿಖೆ ಪೂರ್ಣಗೊಂಡಿದ್ದು ಆರೋಪಿತರ ವಿರುದ್ದ ಆರೋಪ ಸಾಬೀತಾಗಿದ್ದರಿಂದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

4. ಸಾಕ್ಷಿಯು 11 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ನಿಶಾನೆಯಾಗಿ ಗುರುತಿಸಬೇಕೆಂದು ಹಿ.ಸ.ಸ.ಅ ರವರು ಕೋರಿದ್ದಾರೆ. ಆರೋಪಿ ಪರ ವಕೀಲರು ಸದರಿ ಫೋಟೋಗಳ ಸಿ.ಡಿ. ಯನ್ನು ಹಾಜರುಪಡಿಸಿಲ್ಲ. ಆದ್ದರಿಂದ ಸದರಿ ಫೋಟೋಗಳನ್ನು ನಿಶಾನೆಗಳಾಗಿ ಗುರುತಿಸಲು ಬರುವುದಿಲ್ಲ ಎಂದು ಆಕ್ಷೇಪಣೆ ವ್ಯಕ್ತಿಪಡಿಸಿರುತ್ತಾರೆ. ಆದ್ದರಿಂದ ಆರೋಪಿ ಪರ ವಕೀಲರ ಆಕ್ಷೇಪಣೆಗೆ ಒಳಪಟ್ಟು ಸದರಿ **ಫೋಟೋಗಳನ್ನು ನಿಪಿ-4 ರಿಂದ 14 ಎಂದು ಗುರುತಿಸಲಾಯಿತು**. ಮದುವೆಯ ವಿವಾಹ ಆಮಂತ್ರಣ ಪತ್ರಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಆದ್ದರಿಂದ ಸದರಿ **ಆಮಂತ್ರಣ ಪತ್ರಿಕೆಯನ್ನು ನಿಪಿ-15 ಎಂದು ಗುರುತಿಸಲಾಯಿತು**. ಸ್ಪಂದನಾ ವನಿತಾ ಸಹಾಯ ವಾಣಿಯವರಿಂದ ಪಡೆದುಕೊಂಡ ದಾಖಲೆಗಳ ದೃಢೀಕರಿಸಿದ ಪ್ರತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. **ಆದ್ದರಿಂದ 12 ಪುಟಗಳಿರುವ ಸದರಿ ದಾಖಲೆಗಳನ್ನು ಒಟ್ಟಾಗಿ ನಿಪಿ-16 ಎಂದು ಗುರುತಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

5. ಸಾಕ್ಷಿಗಳಿಗೆ ಹೇಳಿಕೆ ನೀಡುವಂತೆ ನಾನು ನೋಟಿಸ್ ಕೊಟ್ಟಿಲ್ಲ. ಚಾಸಾ-1 ರವರು ಮರುಹೇಳಿಕೆ ನೀಡುತ್ತೇನೆ ಎಂದು ಸ್ವತಃ ಬಂದಿರಲಿಲ್ಲ, ನಾನು ಮೌಖಿಕವಾಗಿ ಅವರಿಗೆ ಕರೆದು ಅವರ ಮರುಹೇಳಿಕೆ ಪಡೆದುಕೊಂಡಿರುತ್ತೇನೆ. ಚಾಸಾ-1 ರವರಿಗೆ ನಾನು ಲಿಖಿತ ನೋಟಿಸ್ ಕೊಟ್ಟಿಲ್ಲ.

ಪ್ರಶ್ನೆಃ ಸ್ಥಳ ಪಂಚನಾಮೆಯನ್ನು ಯಾರು ಮಾಡಿದ್ದಾರೆ ?

ಉತ್ತರಃ ಸ್ಥಳ ಪಂಚನಾಮೆಯನ್ನು ನಾನೇ ಮಾಡಿದ್ದೇನೆ, ಆದರೆ ಅದರಲ್ಲಿ ಸಹಿ ಮಾಡಿರುವುದು ಬಿಟ್ಟು ಹೋಗಿರುತ್ತದೆ.

ಪಂಚನಾಮೆ ಮಾಡಿದ ತನಿಖಾಧಿಕಾರಿ ಪಂಚನಾಮೆಗೆ ಸಹಿ ಮಾಡುತ್ತಾರೆ ಎಂದರೆ ಸರಿ. ನಾನು ಸ್ಥಳ ಪಂಚನಾಮೆ ಮಾಡಲು ಹೋಗಿಲ್ಲ, ಆದ್ದರಿಂದ ಸ್ಥಳ ಪಂಚನಾಮೆಗೆ ಸಹಿ ಮಾಡಿಲ್ಲಎಂದರೆ ಸರಿಯಲ್ಲ. ಪಂಚರಿಗೆ ನಾನು ಲಿಖಿತವಾಗಿ ನೋಟಿಸ್ ಕೊಟ್ಟಿಲ್ಲ. ಪಂಚನಾಮೆಗೆ ನಾರಾಯಣ ಮತ್ತು ವೆಂಕಟೇಶ ಎಂಬುವವರಿಬ್ಬರು ಪಂಚರು ಮತ್ತು ಫಿರ್ಯಾದಿ ಸಹಿ ಮಾಡಿದ್ದಾರೆ. ಫಿರ್ಯಾದಿದಾರರು ಸದರಿ ಮನೆಯಲ್ಲಿ ವಾಸವಾಗಿದ್ದರು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿಲ್ಲ. ಪಂಚನಾಮೆಗೆ ನಾನು ಬೆಳಗಿನ ಸಮಯದಲ್ಲಿ ಹೋಗಿರುತ್ತೇನೆ. ದಿನಾಂಕ 05/07/2014 ರಂದು ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ಪಂಚನಾಮೆಯನ್ನು ಠಾಣೆಯಲ್ಲಿಯೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

6. ನಾನು ಹೇಳಿದಂತ ದಿನಾಂಕಗಳಂದು ಸಾಕ್ಷಿದಾರರು ಠಾಣೆಗೆ ಬಂದಿಲ್ಲ ಮತ್ತು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಫಿರ್ಯಾದುದಾರರ ಪ್ರಭಾವಕ್ಕೆ ಒಳಗಾಗಿ ಸಾಕ್ಷಿದಾರರ ಹೇಳಿಕೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ರಿಂದ 14 ರವರೆಗಿನ ಫೋಟೋಗಳಿಗೆ ಸಂಬಂಧಿಸಿದ ಸಿ.ಡಿ.ಯನ್ನು ಫಿರ್ಯಾದುದಾರರಿಂದ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-4 ರಿಂದ 14

ರವರೆಗಿನ ಫೋಟೋ ಸೃಷ್ಟಿಸಿದ ಫೋಟೋಗಳಾಗಿರುತ್ತವೆ, ಆದ್ದರಿಂದ ಅವುಗಳಿಗೆ ಸಂಬಂಧಿಸಿದ ಸಿ.ಡಿ. ಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಫೋಟೋ ತೆಗೆದ ಫೋಟೋಗ್ರಾಫರ್ ನ್ನು ನಾನು ವಿಚಾರಣೆ ಮಾಡಿಲ್ಲ. ಬಿಲ್ ಗಳನ್ನು ಕೊಟ್ಟ ವ್ಯಕ್ತಿಗಳನ್ನು ಕರೆಸಿ ನಾನು ವಿಚಾರಣೆ ಮಾಡಿಲ್ಲ. ಸದರಿ ಬಿಲ್ ಗಳು ಸೃಷ್ಟಿಸಿದ ದಾಖಲೆಗಳಾಗಿದ್ದರಿಂದ ನಾನು ಸದರಿ ಬಿಲ್ ಗಳನ್ನು ಕೊಟ್ಟ ವ್ಯಕ್ತಿಗಳನ್ನು ಕರೆಸಿ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ.

7. ನಿಪಿ-16 ದಾಖಲೆಗಳನ್ನು ಸ್ಪಂದನಾ ವನಿತಾ ಸಹಾಯ ವಾಣಿಯವರಿಗೆ ಮೌಖಿಕವಾಗಿ ಕೇಳಿ ಪಡೆದುಕೊಂಡಿರುತ್ತೇನೆ. ಲಿಖಿತವಾಗಿ ಅವರಿಗೆ ನೋಟಿಸ್ ಕೊಟ್ಟಿರುವುದಿಲ್ಲ. ಸದರಿ ನಿಪಿ-16 ರ ದಾಖಲೆಗಳನ್ನು ಫಿರ್ಯಾದುದಾರರೇ ಸೃಷ್ಟಿಸಿ ಹಾಜರು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸ್ಪಂದನಾ ವನಿತಾ ಸಹಾಯ ವಾಣಿಯವರು ಸದರಿ ದಾಖಲೆಗಳನ್ನು ನನಗೆ ಸಲ್ಲಿಸಿದ ಬಗ್ಗೆ ನನ್ನ ವಿಳಾಸಕ್ಕೆ ಯಾವುದೇ ಪತ್ರ ಬರೆದಿಲ್ಲ. ಫಿರ್ಯಾದುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸದರಿ ಎಲ್ಲಾ ಸೃಷ್ಟಿಸಿದ ದಾಖಲಾತಿಗಳನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

8. ದೂರುದಾರರು ಈ ದೂರನ್ನು ಕೊಡುವ ಮೊದಲೇ 1ನೇ ಆರೋಪಿ ದೂರುದಾರರ ವಿರುದ್ದ ಮೊ.ಸಂ.213/2014 ರಂತೆ ದಾಖಲಿಸಿದ್ದರು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಸದರಿ ಪ್ರಕರಣ ಈಗ ಸಿ.ಸಿ. ಆಗಿ ನೊಂದಣಿಯಾಗಿದ್ದು, ಅದರ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. 1ನೇ ಆರೋಪಿ ಸದರಿ ದೂರು ದಾಖಲಿಸಿದ ನಂತರ ಫಿರ್ಯಾದುದಾರರು ಅದಕ್ಕೆ ಪ್ರತಿಯಾಗಿ ಈ ದೂರು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಇನ್ನೊಂದು ಪ್ರಕರಣ ದಾಖಲಾಗಿರುವ ವಿಷಯ ಗೊತ್ತಿದ್ದರೂ ಸಹ ಅಂತಿಮ ವರದಿಯಲ್ಲಿ ಸದರಿ ಅಂಶಗಳನ್ನು ನಾನು ಉದ್ದೇಶಪೂರ್ವಕವಾಗಿ ನಾನು ನಮೂದಿಸಿಲ್ಲ ಎಂದರೆ ಸರಿಯಲ್ಲ.

9. ಚಾಸಾ-1 ರವರಿಗೆ ಗಾಯವಾಗಿರುವ ಬಗ್ಗೆ ನಾನು ಯಾವುದೇ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿಲ್ಲ. ಯಾವುದೇ ಘಟನೆಯಾಗಿಲ್ಲ ಆದ್ದರಿಂದ ಯಾವುದೇ ಗಾಯದ ಪ್ರಮಾಣ ಪತ್ರ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ವರದಕ್ಷಿಣೆ ಕಿರುಕುಳ ಮತ್ತು ವರದಕ್ಷಿಣೆ ಪಡೆದ ಬಗ್ಗೆ ಎಲ್ಲ ಊಹಾಪೂಹಾ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಪೂರಕ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

10. ದೂರುದಾರರ ತಂದೆ-ತಾಯಿಯವರ ಹೆಸರಿನಲ್ಲಿರುವ ಆಸ್ತಿಗಳು ಇರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಪಡೆದುಕೊಂಡಿಲ್ಲ. ದೂರುದಾರರು ದೂರಿಗೆ ಪ್ರತಿಯಾಗಿ ಸಲ್ಲಿಸಿರುವ ದೂರಿನ ಆಧಾರದ ಮೇಲೆ ಸರಿಯಾಗಿ ತನಿಖೆ ಮಾಡದೇ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಮತ್ತು ಫಿರ್ಯಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)

ಮು.ಮ.ದಂ.ನ್ಯಾ.ಬೆಂ.ನಗರ.